<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 431 |
| ಉತ್ತರಿಸುವ ದಿನಾಂಕ | : | 15.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ | Answer |
|---|---|---|---|
| ಅ) | ರಾಜ್ಯದ ವಿವಿಧ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಡುವ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ಸೌಕರ್ಯಗಳಾದ ನೇಮಕಾತಿ ಆದೇಶ, ಗುರುತಿನ ಚೀಟಿ, ಪಿ.ಎಫ್, ಇ.ಎಸ್.ಐ., ಮುಂತಾದವುಗಳನ್ನು ನೀಡಲು ಸರ್ಕಾರದಿಂದ ಹಲವಾರು ಆದೇಶಗಳಿದ್ದರೂ ಹಲವಾರು ನೌಕರರು ಈ ಸೌಕರ್ಯಗಳಿಂದ ವಂಚಿತರಾಗಿರುವುದಕ್ಕೆ ಕಾರಣಗಳೇನು; | ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ಗುತ್ತಿಗೆ ಕಾರ್ಮಿಕ ಕಾಯ್ದೆ, 1970, ಕನಿಷ್ಠ ವೇತನ ಕಾಯ್ದೆ, 1948, ಹೆರಿಗೆ ಭತ್ಯೆ ಕಾಯ್ದೆ, 1961 ಹಾಗೂ ಇನ್ನಿತರೆ ಸಂಬಂಧಿತ ಕಾರ್ಮಿಕ ಕಾಯ್ದೆಗಳು ಅನ್ವಯಿಸುತ್ತಿದ್ದು, ಸದರಿ ಕಾಯ್ದೆಗಳನ್ವಯ ನೇಮಕಾತಿ ಆದೇಶ, ಗುರುತಿನ ಚೀಟಿ ಮತ್ತು ನಿಗದಿತ ವೇತನ ಪಾವತಿಸುವುದು ಇತ್ಯಾದಿಗಳು ಕಾಯ್ದೆಯ ಪ್ರಾವಧಾನಗಳನ್ವಯ ಕಡ್ಡಾಯವಾಗಿರುತ್ತದೆ. ಆದರೆ, ಕೆಲವು ಏಜೆನ್ಸಿ / ಮಾಲೀಕರು ಈ ರೀತಿಯ ಶಾಸನಾತ್ಮಕ ಸೌಲಭ್ಯಗಳನ್ನು ಹೊರಗುತ್ತಿಗೆ ನೌಕರರಿಗೆ ನೀಡದೇ ಇರುವುದು ಹೊರಗುತ್ತಿಗೆ ನೌಕರರು ಶಾಸನಾತ್ಮಕ ಸೌಲಭ್ಯಗಳಿಂದ ವಂಚಿತರಾಗಲು ಕಾರಣವಾಗಿರುತ್ತದೆ.<br><br>ಈ ಸಂಬಂಧ ಇಲಾಖೆಯಲ್ಲಿ ಕೆಲವು ದೂರುಗಳು ಸ್ವೀಕೃತವಾಗುತ್ತಿದ್ದು, ಸದರಿ ದೂರುಗಳಿಗೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯ ನಿರೀಕ್ಷಕರು/ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಪರಿಹಾರವನ್ನು ಒದಗಿಸಲು ಸೂಕ್ತ ಕ್ರಮ ವಹಿಸಲಾಗಿದೆ.<br><br>ಇ.ಎಸ್.ಐ ಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ಆದೇಶದನ್ವಯ ವೇತನವನ್ನು ನೀಡುತ್ತಿದ್ದು, ಶಾಸನಬದ್ಧ ಕಡಿತವಾದ ಇ.ಎಸ್.ಐ. ವಂತಿಗೆಗಳನ್ನು ಸರಿಯಾಗಿ ನೀಡಲಾಗುತ್ತಿದೆ. ನೌಕರರುಗಳು ಈ ಸೇವೆಯಿಂದ ವಂಚಿತರಾಗಿರುವ ಬಗ್ಗೆ ಯಾವುದೇ ಪ್ರಕರಣಗಳು ಇರುವುದಿಲ್ಲ. ನೇಮಕಾತಿ ಆದೇಶ ಮತ್ತು ಗುರುತಿನ ಚೀಟಿಯನ್ನು ಹೊರಗುತ್ತಿಗೆ ಸಂಸ್ಥೆಯಿಂದ ಹೊರಗುತ್ತಿಗೆ ನೌಕರರಿಗೆ ನೀಡಲಾಗಿರುತ್ತದೆ.<br><br>ಗುತ್ತಿಗೆ ನೌಕರರ PF ಗೆ ಸಂಬಂಧಿಸಿದಂತೆ, ಉದ್ಯೋಗಿಗಳ ಭವಿಷ್ಯ ನಿಧಿಗಳು ಮತ್ತು ವಿವಿಧ ನಿಬಂಧನೆಗಳ ಕಾಯ್ದೆ, 1952 ರಡಿಯಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಯೋಜನೆ, 1952 ರ ಪ್ಯಾರಾ 30 ರ ಪ್ರಕಾರ, ಮುಖ್ಯ ಉದ್ಯೋಗದಾತನು ಎಲ್ಲಾ ಗುತ್ತಿಗೆ ನೌಕರರಿಗೆ ವಂತಿಗೆಯನ್ನು ನೀಡಲು ಬಾಧ್ಯಸ್ಥನಾಗಿರುತ್ತಾನೆ. | The Contract Labour Act, 1970, Minimum Wages Act, 1948, Maternity Benefit Act, 1961 and other relevant labour laws are applicable to the outsourced workers performing duties in various departments, appointment order, identity card and payment of fixed wages are mandatory as per the provisions of the Act. However, some agencies/ employers do not provide such statutory benefits to the outsourced workers which results in the outsourced workers being deprived of the statutory benefits.<br><br>In this regard, some complaints are being received in the department and regarding such complaints, the inspectors/ officers of the scope of work are checking and inspecting as per the rules and appropriate action has been taken to provide redressal if any violations are found.<br><br>The outsourced employees working in various departments are paid wages as per the Minimum Wages Act and orders, statutory deductions such as ESI. and P.F. There will be no cases of employees being deprived of these services if the vouchers are issued properly. Appointment orders and identity cards are issued by the outsourcing firm to the outsourced employees.<br><br>However, as far as issue of PF benefits to contract employees under Employees' Provident Funds and Miscellaneous Provisions Act, 1952 is concerned, Para 30 of the Employees' Provident Fund Scheme, 1952 stipulates that the Principal Employer shall be responsible for remittance of contribution in respect of all contract employees. |

| | | | |
|---|---|---|---|
| ಆ) | ಹೊರಗುತ್ತಿಗೆ ಏಜೆನ್ಸಿ ಮುಖಾಂತರ ನೇಮಕವಾದ ನೌಕರರಿಗೆ ನಿರ್ದಿಷ್ಟ ಅವಧಿಯಲ್ಲಿ ವೇತನ ಸಿಗದೇ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದಿಂದ ಹೊರಗುತ್ತಿಗೆ ನೌಕರರ ಸಮಸ್ಯೆಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು: | ಹೊರಗುತ್ತಿಗೆ ಏಜೆನ್ಸಿ ಮುಖಾಂತರ ನೇಮಕವಾದ ನೌಕರರಿಗೆ ನಿಗದಿತ ಅವಧಿಯಲ್ಲಿ ವೇತನ ಪಾವತಿಯಾಗದೇ ಇರುವ ಕುರಿತು ದೂರುಗಳು ಸ್ವೀಕೃತವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವೇತನ ಪಾವತಿ ಕಾಯ್ದೆ, 1936ರನ್ವಯ 1000 ಕ್ಕಿಂತ ಕಡಿಮೆ ಕಾರ್ಮಿಕರು/ ನೌಕರರು ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹವರಿಗೆ ಮಾಹೆಯ 7ನೇ ದಿನದ ಮುಕ್ತಾಯದ ಮೊದಲು ಹಾಗೂ 1000 ಕ್ಕಿಂತ ಹೆಚ್ಚಿನ ಕಾರ್ಮಿಕರು/ ನೌಕರರು ಕೆಲಸ ನಿರ್ವಹಿಸುತ್ತಿದ್ದಲ್ಲಿ ಮಾಹೆ 10ನೇ ದಿನದ ಮುಕ್ತಾಯದ ಮೊದಲು ವೇತನ ಪಾವತಿಸಲು ಹೊರಗುತ್ತಿಗೆ ಏಜೆನ್ಸಿ/ ಮಾಲೀಕರು ಬಾಧ್ಯಸ್ಥರಾಗಿರುತ್ತಾರೆ.<br>ಸದರಿ ವಿಷಯದ ಕುರಿತು ದೂರುಗಳು ಸ್ವೀಕೃತವಾದಲ್ಲಿ ವೇತನ ಪಾವತಿ ಕಾಯ್ದೆ, 1936ರಡಿ ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಕ್ಲೇಮ್ ಪ್ರಾಧಿಕಾರಿಗಳು ಸೆಕ್ಷನ್ 15 ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ವಿಚಾರಣೆ ನಡೆಸಿ, ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ ಸಂಸ್ಥೆಗಳ ವಿರುದ್ಧ ಆದೇಶಗಳನ್ನು ಹೊರಡಿಸುತ್ತಾರೆ ಹಾಗೂ ಕರ್ನಾಟಕ ವೇತನ ಪಾವತಿ ನಿಯಮಾವಳಿಯ ನಿಯಮ 20 ರನ್ವಯ ವೇತನ ಪಾವತಿಯನ್ನು ವಿಳಂಬಗೊಳಿಸಿದ ಹೊರಗುತ್ತಿಗೆ ಏಜೆನ್ಸಿ/ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶವಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. | Complaints about non-payment of salaries to employees hired through outsourcing agencies have come to the notice of the government.<br><br>As per the Payment of Wages Act, 1936 implemented by the Labour Department, if less than 1000 workers/employees are working, the outsourcing agency/ employer is liable to pay wages to such workers/ employees before the end of the 7th day of the month and if there are more than 1000 Workers/Employees are working outsourcing Agency/Employer is liable to pay wages before the end of the 10th day of the month.<br>In case of non-payment/ less payment, claim applications have been filed by the Notified Inspectors and the same are being heard by the Claim Authorities. Under Section 15 of Payment of Wages Rules 1963, claim application will be decided and direction will be given to the contractors/ firms to pay the wages along with the compensation and also can prosecute the person who has delayed the payment of wages under Rule 20 of Karnataka Payment of Wages Rule. Issuing orders against institutions under Rule 20 of the Karnataka Wages Rules, legal action is allowed against the outsourcing agency/owner for delay in payment of wages and action is being taken as per rules. |
| ಇ) | ಹೊರಗುತ್ತಿಗೆ ನೌಕರರು ಕರ್ತವ್ಯದ ವೇಳೆ ಅಪಘಾತಕ್ಕೆ ಒಳಗಾಗಿ ಸಾವನ್ನಪ್ಪಿದ್ದರೆ, ಆ ಕುಟುಂಬದವರ ಜೀವನ ನಿರ್ವಹಣೆಗಾಗಿ ಪರಿಹಾರ ನೀಡಲು ಕಾರ್ಮಿಕ ಇಲಾಖೆ ಯಾವ ಮಾನದಂಡಗಳನ್ನು ನಿಗದಿಪಡಿಸಿದೆ ಮತ್ತು ಇದರ ಪರಿಪಾಲನೆ ಆಗುತ್ತಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಹೊರಗುತ್ತಿಗೆ ನೌಕರರು ಕರ್ತವ್ಯದ ವೇಳೆ ಅಪಘಾತಕ್ಕೆ ಒಳಗಾಗಿ ಸಾವನ್ನಪ್ಪಿದ್ದರೆ, ಆ ಕುಟುಂಬದವರ ಜೀವನ ನಿರ್ವಹಣೆಗಾಗಿ ಪರಿಹಾರ ನೀಡಲು, ಸದರಿ ನೌಕರರು ಇ.ಎಸ್.ಐ. ವ್ಯಾಪ್ತಿಗೆ ಒಳಪಡುವುದಿದ್ದಲ್ಲಿ ಇ.ಎಸ್.ಐ. ವತಿಯಿಂದ ನಿಯಮಾನುಸಾರ ಪರಿಹಾರ ಪಡೆಯಬಹುದಾಗಿದೆ.<br><br>ಇ.ಎಸ್.ಐ. ವ್ಯಾಪ್ತಿಗೆ ಬಾರದಿದ್ದಲ್ಲಿ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ, 1923 ರನ್ವಯ ಪರಿಹಾರ ಪಡೆಯಬಹುದಾಗಿದೆ. ಪ್ರಸ್ತುತ ಸದರಿ ಕಾಯ್ದೆಯನ್ನು ನ್ಯಾಯಾಂಗ ಇಲಾಖೆಯ ವ್ಯಾಪ್ತಿಗೆ ಬರುವ ಲಘು ವ್ಯವಹಾರಗಳ ನ್ಯಾಯಾಲಯಗಳು ಅನುಷ್ಠಾನಗೊಳಿಸುತ್ತಿದ್ದು, ಬಾಧಿತ ನೌಕರರ ಕಾನೂನುಬದ್ಧ ವಾರಸುದಾರರು ಸಂಬಂಧಿಸಿದ ನ್ಯಾಯಾಂಗ ಇಲಾಖೆಯ ಸಕ್ಷಮ ಪ್ರಾಧಿಕಾರದ ಮುಂದೆ ಕ್ಲೇಮ್ ಅರ್ಜಿ ಸಲ್ಲಿಸಿ, ಪರಿಹಾರ ಪಡೆಯಲು ಅವಕಾಶವಿರುತ್ತದೆ. | If an outsourced employee dies due to an accident while on duty, to provide compensation for the maintenance of the family, the said employee may apply for ESI, if covered by E.S.I., compensation can be obtained as per E.S.I. rules.<br><br>If not covered, compensation can be obtained under the Workmen's Compensation Act, 1923. At present, the said Act is being implemented by the Small Cause Courts under the Judiciary Department and the legal heirs of the affected employees have the opportunity to file a claim before the competent authority of the Judiciary Department and can get compensation. |

| | | | |
|---|---|---|---|
| ಈ) | ಹೊರಗುತ್ತಿಗೆ ನೌಕರರಿಗೆ ಸಮಸ್ಯೆಗಳು ಎದುರಾದಲ್ಲಿ, ಈ ಸಮಸ್ಯೆಗಳನ್ನು ನಿವಾರಿಸಲು ಇಲಾಖಾ ವತಿಯಿಂದ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗುತ್ತಿದೆಯೇ ಎಂಬುದರ ಬಗ್ಗೆ ಮಾಹಿತಿ ನೀಡುವುದು? | ಹೊರಗುತ್ತಿಗೆ ನೌಕರರಿಗೆ ಸಮಸ್ಯೆಗಳು ಎದುರಾದಲ್ಲಿ, ಈ ಸಮಸ್ಯೆಗಳನ್ನು ನಿವಾರಿಸಲು ಇಲಾಖಾ ವತಿಯಿಂದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳಡಿ, ಅಧಿಕಾರಿ/ ನಿರೀಕ್ಷಕರುಗಳನ್ನು ನಿಯಂತ್ರಣಾಧಿಕಾರಿ/ ಪ್ರಾಧಿಕಾರಿಗಳೆಂದು ನೇಮಿಸಿ ಅಧಿಸೂಚಿಸಿರುವುದರಿಂದ, ಸದರಿ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ಅಧಿಕಾರಿಗಳಲ್ಲಿ ಬಾಧಿತ ಹೊರಗುತ್ತಿಗೆ ನೌಕರರು ಕಾರ್ಯವ್ಯಾಪ್ತಿಯ ಕಛೇರಿಗೆ ನೇರವಾಗಿ ಮನವಿ ಸಲ್ಲಿಸಿ, ಪರಿಹಾರ ಪಡೆಯಬಹುದಾಗಿರುತ್ತದೆ.<br><br>ಮುಂದುವರೆದು ಬಾಧಿತ ಕಾರ್ಮಿಕರು/ನೌಕರರು ಕನಿಷ್ಠ ವೇತನ, ವೇತನ ಪಾವತಿ, ಹಾಗೂ ಇತರೆ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಉಚಿತ ಕಾರ್ಮಿಕ ಸಹಾಯವಾಣಿ 155214ಗೆ ಕರೆ ಮಾಡಿ ಸೂಕ್ತ ಮಾರ್ಗದರ್ಶನ/ಮಾಹಿತಿ ಪಡೆದು ನಿಯಮಾನುಸಾರ ಪರಿಹಾರ ಪಡೆಯಬಹುದಾಗಿದೆ. | If the outsourced employees face problems, under the various labour laws being implemented by the Labor Department, the affected outsourced employees can directly lodge complaints to the competent authorities appointed as "Inspectors/ controllers/ Authority." under various labour laws, such disputes may be represented to respective Labour Inspectors and Labour Officers for appropriate Redressal.<br><br>Further, affected workers/employees who have grievances related to minimum wages, payment of wages, and other issues may call toll free labour helpline 155214 for proper guidance/information and redressal as per rules. |

**ಸಂಖ್ಯೆ: ಕಾಇ 61 ಎಲ್ ಡಬ್ಲ್ಯೂಎ 2024**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**